ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಮುತ್ತಪ್ಪ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 12–09–2024 ರ ಗುರುವಾರದಂದು ಪೂರ್ವಹ್ನ 11.00 ಗಂಟೆಗೆ ನಡೆದ ಪ್ರಾಧಿಕಾರದ 62 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತವಾದ ಸದಸ್ಯರು.
4. ಶ್ರೀ ವಿ.ಎಸ್. ಸಜಿ, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
5. ಶ್ರೀಮತಿ ಸಂಗೀತ ಕೆ.ಆರ್, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
6. ಶ್ರೀ ಕಿರಣ್‌ಕುಮಾರ್ ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ

ಗೈರುಹಾಜರಾದವರು :–

1. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ
3. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ

ವಿಷಯ ಸಂಖ್ಯೆ(01): ದಿನಾಂಕ: 20–07–2024 ರಂದು ನಡೆದ ಪ್ರಾಧಿಕಾರದ 61ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ:20–07–2024 ರಂದು ನಡೆದ ಪ್ರಾಧಿಕಾರದ 60ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

(i): ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಸಭೆಯಲ್ಲಿ ವಿಷಯ ಸಂಖ್ಯೆ (ii)ರಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಪ್ರಾಧಿಕಾರದಿಂದ ಇದುವರೆಗೂ ಕೈಗೊಂಡ ಕ್ರಮದ ವಿವರಗಳನ್ನು ಟಿಪ್ಪಣಿಯಲ್ಲಿ ನಮೂದಿಸಿದ್ದು, ಸದಸ್ಯಕಾರ್ಯದರ್ಶಿಗಳು ತಮ್ಮ ಅಭಿಪ್ರಾಯದಲ್ಲಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ವಿಭಾಗ, ಮಂಗಳೂರು ಇವರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಡಿಕೇರಿ ಇವರಿಗೆ ಅನುಮತಿ ದೊರೆತ ನಂತರ ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಕೆರೆಯ ಅಂದಾಜು ಪಟ್ಟಿ ಹಾಗೂ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು ಎಂಬುದಾಗಿ ತಿಳಿಸಿರುತ್ತಾರೆ.

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಮುಂದಿನ ಸಭೆಗೆ ಮಂಡಿಸಿ ಚರ್ಚಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಆದ್ದರಿಂದ ಸದರಿ ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಕುಶಾಲನಗರ ಯೋಜನಾ ಪ್ರಾಧಿಕಾರದ 2024–25ನೇ ಸಾಲಿನ ನಿರೀಕ್ಷಿತ ಆಯವ್ಯದಲ್ಲಿ ಕೆರೆ ಅಭಿವೃದ್ಧಿಗಾಗಿ ನಿಗಧಿಪಡಿಸಿರುವ ಸಂಪೂರ್ಣ

ಮೊಬಲಗನ್ನು ಕೇವಲ ತಾವರೆಕೆರೆ ಅಭಿವೃದ್ಧಿಗಾಗಿ ಉಪಯೋಗಿಸಬೇಕೆಂದು ಹಾಗೂ ಈ ಹಿಂದೆ ಪಟ್ಟಣಪಂಚಾಯಿತಿ ವತಿಯಿಂದ ತಯಾರಿಸಿದ್ದ ತಾವರೆಕೆರೆಯ ಡಿ.ಪಿ.ಆರ್ ಮತ್ತು ಅಂದಾಜುಪಟ್ಟಿಗಳನ್ನು ಪರಿಷ್ಕರಿಸಿಕೊಂಡು ಮತ್ತೊಮ್ಮೆ ತಯಾರಿಸಿ, ಸದರಿ ವಿಷಯದ ಬಗ್ಗೆ ಚರ್ಚಿಸಲು ದಿನಾಂಕ:18–09–2024 ರಂದು ವಿಶೇಷ ಸಭೆ ನಿಗಧಿಪಡಿಸಿ, ವಿಶೇಷ ಸಭೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ ಮತ್ತು ಅಂತರ್ಜಲ ಅಭಿವೃದ್ಧಿ, ಉಪವಿಭಾಗ, ಮಡಿಕೇರಿ ಇವರನ್ನು ಆಹ್ವಾನಿಸಿ ತಾವರೆಕೆರೆಯ ಡಿ.ಪಿ.ಆರ್ ಬಗ್ಗೆ ಚರ್ಚಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ii): ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿ ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ 3ನೇ ಬ್ಲಾಕ್ ಚಿಕ್ಕಣ್ಣ ಬಡಾವಣೆಯ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿದ ಸಿ.ಎ. ನಿವೇಶನವನ್ನು ಪ್ರಾಧಿಕಾರದಿಂದ ಹಂಚಿಕೆ ಮಾಡುವ ಬಗ್ಗೆ.

ಟಿಪ್ಪಣಿ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ವಿಷಯಸಂಖ್ಯೆ 12(ಖಖ) ಅಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಪುರಸಭೆ ವ್ಯಾಪ್ತಿಯ 3ನೇ ಬ್ಲಾಕ್, ಚಿಕ್ಕಣ್ಣ ಬಡಾವಣೆಯು ದಿನಾಂಕ: 26–10–2005 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರಿಂದ ಅನುಮೋದನೆಗೊಂಡಿದ್ದು, ಕುಶಾಲನಗರ ಯೋಜನಾ ಪ್ರಾಧಿಕಾರವು ದಿನಾಂಕ:18–02–2008 ರಲ್ಲಿ ಕಾರ್ಯಾರಂಭ ಮಾಡಿರುವುದರಿಂದ, ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018 ದಿನಾಂಕ: 30–01–2018 ರನ್ವಯ ಮತ್ತು ದಿನಾಂಕ:10–09–2015 ರ ಕರ್ನಾಟಕ ರಾಜ್ಯಪತ್ರದಲ್ಲಿ ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಕಲಂ 17(2ಬಿ) ರನ್ವಯ ಬಡಾವಣೆಗಳಿಗೆ ಅಂತಿಮ ಅನುಮೋದನೆ ನೀಡುವಾಗ ನಾಗರೀಕ ಸೌಲಭ್ಯ ನಿವೇಶನಗಳನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳಬೇಕೆಂದು ತಿದ್ದುಪಡಿ ಮಾಡಿರುವುದರಿಂದ, ಸದರಿ ದಿನಾಂಕದ ಪೂರ್ವದಲ್ಲಿ ಯಾವುದೇ ಬಡಾವಣೆಯ ಸಿ.ಎ. ನಿವೇಶನಗಳನ್ನು ಪಟ್ಟಣಪಂಚಾಯಿತಿಗೆ ಹಸ್ತಾಂತರಿಸಿದ್ದರೇ, ಅದನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ಅವಕಾಶವಿರುವುದಿಲ್ಲವಾದ್ದರಿಂದ, ಸದರಿ ಪ್ರಸ್ತಾವನೆಗೆ ಮುಖ್ಯಾಧಿಕಾರಿಗಳ ಹಂತದಲ್ಲೇ ಕ್ರಮವಹಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು.

ಆದರೆ, ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ದಿನಾಂಕ: 17–08–2024 ರ ಜ್ಞಾಪನ ಪತ್ರದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/27/ಟಿಟಿಪಿ/2016 ಬೆಂಗಳೂರು ದಿನಾಂಕ:24–05–2017 (ರಾಜ್ಯಪತ್ರ ದಿನಾಂಕ:01–06–2017) ರ ಅಧಿಸೂಚನೆಯಲ್ಲಿ ಜಾರಿಗೆ ಬಂದಿರುವ The Karnataka Planning Authorities (Allotment of Civic Amenity sites) Rules 2016, ನಿಯಮಗಳ ಪ್ರಕಾರ ಯೋಜನಾ ಪ್ರಾಧಿಕಾರ ಕಾರ್ಯನಿರ್ವಹಿಸುತ್ತಿರುವ ಪುರಸಭೆ ವ್ಯಾಪ್ತಿಯಲ್ಲಿ ಸಿ.ಎ. ನಿವೇಶನವನ್ನು ಆಯಾ ಯೋಜನಾ ಪ್ರಾಧಿಕಾರಗಳು ಮಂಜೂರು ಮಾಡಬೇಕಾದ್ದರಿಂದ ಸದರಿ ನಿಯಮಾವಳಿಯಂತೆ ಕ್ರಮವಹಿಸುವಂತೆ ಸೂಚಿಸಿರುತ್ತಾರೆ.

ಆದ್ದರಿಂದ ಮುಖ್ಯಾಧಿಕಾರಿ, ಪುರಸಭೆ ಇವರು ದಿನಾಂಕ:02–09–2024ರ ಪತ್ರದಲ್ಲಿ ಸದರಿ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಹೆಸರಿಗೆ ನೊಂದಣಿ ಮಾಡಿ ನೀಡಬೇಕಾಗಿರುವುದರಿಂದ ನೊಂದಣಿ ಕಛೇರಿಗೆ ಹಾಜರಾಗಲು ವಿನಾಯಿತಿ ಪತ್ರ ನೀಡಬೇಕೆಂದು ಕೋರಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳ ಜ್ಞಾಪನ ಪತ್ರದಂತೆ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಹೆಸರಿಗೆ ಪರಿತ್ಯಾಜನಾ ಪತ್ರದ ಮುಖಾಂತರ ದಿನಾಂಕ:02–09–2024 ರಂದು ಹಸ್ತಾಂತರಿಸಿಕೊಳ್ಳಲಾಗಿತ್ತು. ಆದರೆ ಪರಿತ್ಯಾಜನಾ ಪತ್ರದಲ್ಲಿ ವಿಸ್ತೀರ್ಣ ತಪ್ಪಾಗಿ ನಮೂದಾಗಿದ್ದರಿಂದ ಮತ್ತೊಮ್ಮೆ ದಿನಾಂಕ:09–09–2024 ರಂದು ವಿಸ್ತೀರ್ಣ ಸರಿಪಡಿಸಿ ತಿದ್ದುಪಡಿ ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರದ ಹೆಸರಿಗೆ ಹಸ್ತಾಂತರಿಸಿಕೊಳ್ಳಲಾಗಿದೆ. ಸದರಿ ನಿವೇಶನದ ಖಾತೆ

(ನಮೂನೆ–3)ಅನ್ನು ಮುಖ್ಯಾಧಿಕಾರಿಗಳು ದಿನಾಂಕ:10–09–2024 ರಂದು ಸದಸ್ಯಕಾರ್ಯದರ್ಶಿಯವರ ಹೆಸರಿಗೆ ನೋಂದಾಯಿಸಿ ನೀಡಿರುತ್ತಾರೆ. ಸದರಿ ನಿವೇಶನದ ಇತ್ತೀಚಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿಕೊಡುವಂತೆ ಉಪನೊಂದಣಾಧಿಕಾರಿ, ಕುಶಾಲನಗರ ಇವರನ್ನು ಕೋರಲಾಗಿದ್ದು, ಉಪನೊಂದಣಾಧಿಕಾರಿಗಳು ದಿನಾಂಕ:11–09–2024 ರಂದು ಇತ್ತೀಚಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ನೀಡಿರುತ್ತಾರೆ. ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ ಸದರಿ ಸಿ.ಎ. ನಿವೇಶವನ್ನು ಪೋಲೀಸ್ ಇಲಾಖೆಗೆ ಸಂಚಾರಿ ಪೋಲೀಸ್ ಠಾಣೆ ನಿರ್ಮಿಸುವ ಸಂಬಂಧ 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಲು ಕ್ರಮವಹಿಸಬೇಕಾಗಿರುವುದರಿಂದ ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಗಳ ಅಭಿಪ್ರಾಯ : ಟಿಪ್ಪಣಿಯಲ್ಲಿ ವಿವರಿಸಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಜ್ಞಾಪನ ಪತ್ರದ ಮೇರೆಗೆ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶನವನ್ನು ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರದ ಹೆಸರಿಗೆ ಹಸ್ತಾಂತರಿಸಿಕೊಳ್ಳಲಾಗಿದೆ. ಸದರಿ ಸಿ.ಎ. ನಿವೇಶನದ ಖಾತೆ(ನಮೂನೆ–3) ಅನ್ನು ಮುಖ್ಯಾಧಿಕಾರಿಗಳು ದಿನಾಂಕ:10–09–2024 ರಂದು ಸದಸ್ಯಕಾರ್ಯದರ್ಶಿ ಹೆಸರಿಗೆ ನೊಂದಾಯಿಸಿ ನೀಡಿರುತ್ತಾರೆ. ಉಪನೊಂದಣಾಧಿಕಾರಿ, ಕುಶಾಲನಗರ ಇವರು ಸದರಿ ಸಿ.ಎ. ನಿವೇಶನದ ಇತ್ತೀಚಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ನೀಡಿರುತ್ತಾರೆ. ಸದರಿ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶವನ್ನು ಪೋಲೀಸ್ ಇಲಾಖೆಗೆ ಸಂಚಾರಿ ಪೋಲೀಸ್ ಠಾಣೆ ನಿರ್ಮಿಸುವ ಸಂಬಂಧ 30 ವರ್ಷಗಳ ಗುತ್ತಿಗೆ ಲೀಜ್ ಅವಧಿಗೆ ಹಂಚಿಕೆ ಮಾಡಲು ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಬಹದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಜ್ಞಾಪನ ಪತ್ರದ ಮೇರೆಗೆ ಹಾಗೂ The Karnataka Planning Authorities (Allotment of Civic Amenity sites) Rules 2016, ನಿಯಮಗಳ ಪ್ರಕಾರ ಚಿಕ್ಕಣ್ಣ ಬಡಾವಣೆಯ ಸಿ.ಎ. ನಿವೇಶನವನ್ನು ಪೋಲೀಸ್ ಇಲಾಖೆಗೆ ಹಂಚಿಕೆ ಮಾಡಲು ಮುಂದಿನ ಕ್ರಮವಹಿಸಬೇಕೆಂದು ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಜುಲೈ 2024 ಮತ್ತು ಆಗಸ್ಟ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಜುಲೈ 2024 ಮತ್ತು ಆಗಸ್ಟ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

<table>
<tr><td colspan="6">ಜುಲೈ 2024</td></tr>
<tr><td>ಕ್ರ.ಸಂ</td><td>ಜಮಾ</td><td>ಮೊಬಲಗು</td><td>ಕ್ರ.ಸಂ</td><td>ವೆಚ್ಚ</td><td>ಮೊಬಲಗು</td></tr>
<tr><td>1.</td><td>ಪ್ರಾರಂಭಿಕ ಶಿಲ್ಕು</td><td>ರೂ.52,37,015=50</td><td>1.</td><td>ಹೊರಗುತ್ತಿಗೆ ಸೇವೆ</td><td>ರೂ. 39,320=00</td></tr>
<tr><td rowspan="6">2.</td><td rowspan="6">ಜುಲೈ 2024 ರ ಮಾಹೆಯ ಜಮಾ
1) ಪರಿಶೀಲನಾ ಶುಲ್ಕ
2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ</td><td rowspan="6">ರೂ. 1,73,260=00
ರೂ.3,75,870=00</td><td>2.</td><td>ಸದಸ್ಯಕಾರ್ಯದರ್ಶಿ ವೇತನ</td><td>ರೂ. 90,283=00</td></tr>
<tr><td>3.</td><td>ವಿದ್ಯುತ್</td><td>ರೂ. 1,108=00</td></tr>
<tr><td>4.</td><td>ದೂರವಾಣಿ</td><td>ರೂ. 4,129=00</td></tr>
<tr><td>5.</td><td>ಸಾದಿಲ್ವಾರು ವೆಚ್ಚ</td><td>ರೂ. 41,067=00</td></tr>
<tr><td>6.</td><td>ಎಂ.ಸಿ.ಸಿ ಬಾಂಕ್</td><td>ರೂ. 354=00</td></tr>
</table>

	3) ಕಟ್ಟಡದ ಶುಲ್ಕ	ರೂ. 41,030=00		ಚಾರ್ಜಸ್	
	4)ವಿನ್ಯಾಸ ರಚನೆ ಶುಲ್ಕ	ರೂ. 6,260=00		ವೆಚ್ಚ	ರೂ. 1,76,261=00
				ಅಖೈರು ಶಿಲ್ಕು	ರೂ. 56,57,174=50
	ಒಟ್ಟು ಮೊಬಲಗು	ರೂ.58,33,435=50		ಒಟ್ಟು ಮೊಬಲಗು	ರೂ. 58,33,435=50

ಆಗಸ್ಟ್ –2024					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ.56,57,174=50	1.	ಹೊರಗುತ್ತಿಗೆ ಸೇವೆ	ರೂ. 39,320=00
2.	ಆಗಸ್ಟ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 90,283=00
			3.	ವಿದ್ಯುತ್	ರೂ. 1,174=00
	1) ಪರಿಶೀಲನಾ ಶುಲ್ಕ	ರೂ. 6,76,630=00	4.	ದೂರವಾಣಿ	ರೂ. 1,768=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 5,73,345=00	5.	ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್	ರೂ. 3,540=00
			6.	ಸಾದಿಲ್ವಾರ ವೆಚ್ಚ	ರೂ. 8,685=00
	3) ಕಟ್ಟಡದ ಶುಲ್ಕ	ರೂ. 37,320=00	7.	ಸಿ.ಸಿ. ಟಿ.ವಿ ಮತ್ತು ಬಯೋಮೆಟ್ರಿಕ್ ವೆಚ್ಚ	ರೂ. 74,635=00
	4)ವಿನ್ಯಾಸ ರಚನೆ ಶುಲ್ಕ	ರೂ. 33,460=00			
		ರೂ. 8,000=00	8.	ಲೆಕ್ಕ ತನಿಖಾ ಶುಲ್ಕ	ರೂ. 13,648=00
	5)ಇಂಜಿನಿಯರ್ ಶುಲ್ಕ	ರೂ. 1,200=00	9	ಕಛೇರಿ ಬಾಡಿಗೆ (ಅಕ್ಟೋಬರ್ 2023 ರಿಂದ ಮೇ 2024ರ ವರೆಗೆ)	ರೂ. 92,000=00
	6) ಇತರೆ ಶುಲ್ಕ				
			10	ಸ್ವಾತಂತ್ರ್ಯ ದಿನಾಚರಣೆ ವಂತಿಕೆ	ರೂ. 5,000=00
			11	ವಕೀಲರ ಶುಲ್ಕ	ರೂ. 15,000=00
				ವೆಚ್ಚ	ರೂ. 3,45,053=00
				ಅಖೈರು ಶಿಲ್ಕು	ರೂ. 66,42,076=50
	ಒಟ್ಟು ಮೊಬಲಗು	ರೂ.69,87,129=00		ಒಟ್ಟು ಮೊಬಲಗು	ರೂ. 69,87,129=00

31–08–2024 ರ ಅಂತ್ಯಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಶಾಲನಗರ ಶಾಖೆಯಲ್ಲಿ ಇರುವ ಮೊಬಲಗಿನ ವಿವರ.

ಕ್ರ.ಸಂ.	ಬ್ಯಾಂಕ್ ಖಾತೆಯ ವಿವರ	ಮೊಬಲಗು
1.	ಉಳಿತಾಯ ಶುಲ್ಕದ ಖಾತೆ ಸಂಖ್ಯೆ: 64041739956 (ಪರಿಶೀಲನಾ ಶುಲ್ಕ, ಕೆ.ಟಿ.ಸಿ.ಪಿ.ಕಾಯ್ದೆ 18ರ ಅಡಿಯಲ್ಲಿ ಉತ್ತಮತೆ ಶುಲ್ಕ, ಕಟ್ಟಡ ಶುಲ್ಕ ಹಾಗೂ ಇತರೆ ಶುಲ್ಕ)	66,42,076=50
2.	ಕೆರೆ ಅಭಿವೃದ್ಧಿ ಶುಲ್ಕದ ಖಾತೆ ಸಂಖ್ಯೆ: 64113591421	8,20,336=00
3.	ಸೆಸ್ ಶುಲ್ಕದ ಖಾತೆ ಸಂಖ್ಯೆ: 40179698207 (ನೀರು ಸರಬರಾಜು ಸೆಸ್, ಸ್ಲಂ ಸೆಸ್, ವರ್ತುಲ ರಸ್ತೆ,)	11,62,258=00
	ಒಟ್ಟು ಮೊಬಲಗು	86,24,670=50

ನಿರ್ಣಯ:– ಜುಲೈ 2024 ಮತ್ತು ಆಗಸ್ಟ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ:(03): ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ ಹೆಸರಿನಲ್ಲಿರುವ ಸಿ.ಎ. ನಿವೇಶನಗಳನ್ನು 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸುವ ಸಂಬಂಧ ದಿನಾಂಕ:25–03–2024 ರಂದು ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳಿಗೆ ಪತ್ರ ಬರೆದು ಸಿ.ಎ. ನಿವೇಶನಗಳ ಪಟ್ಟಿಯನ್ನು ನೀಡಿ, ಸಿ.ಎ. ನಿವೇಶನವು ತಮ್ಮ ಇಲಾಖೆಗೆ ಅಗತ್ಯತೆ ಇದ್ದಲ್ಲಿ ಈ ಕಛೇರಿಗೆ ಪತ್ರ ಬರೆದು ತಿಳಿಸಬೇಕೆಂದು ಕೋರಲಾಗಿತ್ತು.

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ತಾಲ್ಲೂಕು, ಸೋಮವಾರಪೇಟೆ ಇವರು ದಿನಾಂಕ:23–07–2024 ರ ಪತ್ರದಲ್ಲಿ ಶ್ರೀ ದೇವರಾಜು ಅರಸು ಭವನ ನಿರ್ಮಾಣ ಮಾಡಲು ನಾಗರೀಕ ಸೌಲಭ್ಯದ ನಿವೇಶನ ಅಥವಾ 40 ಸೆಂಟ್ ಜಾಗವನ್ನು ಹಿಂದುಳಿದ ವರ್ಗಗಳ ಇಲಾಖೆಗೆ ಕಾಯ್ದಿರಿಸಿ ಕೊಡಬೇಕೆಂದು ಕೋರಿರುತ್ತಾರೆ.

ಹಿರಿಯ ಉಪನೋಂದಣಾಧಿಕಾರಿ, ಕುಶಾಲನಗರ ಇವರು ದಿನಾಂಕ:25–07–2024ರ ಪತ್ರದಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವ 2400 ಚದರ ಅಡಿ ಅಳತೆಯ ಸಿ.ಎ. ನಿವೇಶನವನ್ನು ಉಪನೊಂದಣಿ ಕಛೇರಿಗೆ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 27 ಟಿಟಿಪಿ 2016 ಬೆಂಗಳೂರು, ದಿನಾಂಕ: 13–06–2017 ರ ಉಪನಿಯಮ 9(4) ರನ್ವಯ 2024–25ನೇ ಸಾಲಿಗೆ ನಾಗರೀಕ ಸೌಲಭ್ಯ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಂಬಂಧ ಸಿ.ಎ. ನಿವೇಶನಗಳ ಪಟ್ಟಿ ಮಾಡಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಬೇಕಾಗಿರುತ್ತದೆ. ಪ್ರಸ್ತುತ ಈ ಕೆಳಕಂಡ ಸಿ.ಎ. ನಿವೇಶನಗಳು ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುತ್ತದೆ.

ಕ್ರ. ಸಂ	ಗ್ರಾಮ	ಸ.ನಂ.	ವಿಸ್ತೀರ್ಣ (ಚ.ಮೀ ಗಳಲ್ಲಿ)	ಖಾತೆ
1	ಗುಮ್ಮನಕೊಲ್ಲಿ	85/4	348.37 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
2	ಮಾದಾಪಟ್ಟಣ	59/1, 59/2, 59/3	350.25 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
3	ಬೈಚನಹಳ್ಳಿ	89/5 (89/5, 89/8, 89/9, 89/10, 89/11)	226.61 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
4	ಮುಳ್ಳುಸೋಗೆ	1/1	192.28 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
5	ಬೈಚನಹಳ್ಳಿ	9/2, 10/2, 89/4	819.49 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
6	ಮುಳ್ಳುಸೋಗೆ	93	839.36 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
7	ಬೈಚನಹಳ್ಳಿ	80/2	1078.08 ಚ.ಮೀ	ಪ್ರಾಧಿಕಾರದ ಹೆಸರಿಗೆ ಖಾತೆ ನೊಂದಣಿ ಆಗಿದೆ
8	ಕೂಡ್ಲೂರು	58/9	466.75 ಚ.ಮೀ	ಖಾತೆ ಆಗಿರುವುದಿಲ್ಲ
9	ಕೂಡ್ಲೂರು	59/9	144.0 ಚ.ಮೀ	ಖಾತೆ ಆಗಿರುವುದಿಲ್ಲ
10	ಕೂಡ್ಲೂರು	60/2	1401.46 ಚ.ಮೀ	ಖಾತೆ ಆಗಿರುವುದಿಲ್ಲ
11	ಕೂಡ್ಲೂರು	66/9	405.17 ಚ.ಮೀ	ಖಾತೆ ಆಗಿರುವುದಿಲ್ಲ
12	ಮುಳ್ಳುಸೋಗೆ	43/1, 43/2	1113.05 ಚ.ಮೀ	ಖಾತೆ ಆಗಿರುವುದಿಲ್ಲ

13	ಗುಮ್ಮನಕೊಲ್ಲಿ	37/4	151.85 ಚ.ಮೀ	ಖಾತೆ ಆಗಿರುವುದಿಲ್ಲ
14	ಗುಮ್ಮನಕೊಲ್ಲಿ	37/4	151.687 ಚ.ಮೀ	ಖಾತೆ ಆಗಿರುವುದಿಲ್ಲ

ಮೇಲ್ಕಂಡ ಪಟ್ಟಿಯಲ್ಲಿ ಕ್ರಮ ಸಂಖ್ಯೆ (8) ರಿಂದ (11) ರವರೆಗಿನ ಸಿ.ಎ. ನಿವೇಶನಗಳು ಕೂಡುಮಂಗಳೂರು ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಸಿ.ಎ. ನಿವೇಶನಗಳಿಗೆ ಪ್ರಾಧಿಕಾರದ ಹೆಸರಿಗೆ ಖಾತೆ(ನಮೂನೆ–9&11) ಅನ್ನು ನೊಂದಾಯಿಸಿಕೊಡಬೇಕೆಂದು ದಿನಾಂಕ:31–08–2024 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರನ್ನು ಕೋರಲಾಗಿದೆ. ಕ್ರಮ ಸಂಖ್ಯೆ(12) ರಿಂದ (14) ರವರೆಗಿನ ನಿವೇಶನಗಳು ಪುರಸಭೆ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಸಿ.ಎ. ನಿವೇಶನಗಳಿಗೆ ಪ್ರಾಧಿಕಾರದ ಹೆಸರಿಗೆ ಖಾತೆ(ನಮೂನೆ–3) ಅನ್ನು ನೊಂದಾಯಿಸಿಕೊಡಬೇಕೆಂದು ದಿನಾಂಕ:31–08–2024 ರಂದು ಮುಖ್ಯಾಧಿಕಾರಿ, ಪುರಸಭೆ ಇವರನ್ನು ಕೋರಲಾಗಿದೆ. ಉಪನೊಂದಣಾಧಿಕಾರಿಗಳು, ಕುಶಾಲನಗರ ಇವರು ಕ್ರಮ ಸಂಖ್ಯೆ(9)ರ ವರೆಗಿನ ಸಿ.ಎ. ನಿವೇಶನಗಳ ಇತ್ತೀಚಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ಈಗಾಗಲೇ ನೀಡಿರುತ್ತಾರೆ. ಕ್ರಮ ಸಂಖ್ಯೆ (11) ರಿಂದ (14) ರ ಸಿ.ಎ ನಿವೇಶನಗಳ ಮಾರುಕಟ್ಟೆ ದರ ನಿಗಧಿಪಡಿಸಿಕೊಡಬೇಕೆಂದು ಉಪನೊಂದಾಣಾಧಿಕಾರಿಗಳಿಗೆ ದಿನಾಂಕ:31–08–2024 ರಂದು ಕೋರಲಾಗಿದೆ.

ಹಿಂದಿನ ಸಭೆಯ ವಿಷಯ ಸಂಖ್ಯೆ(i)ರನ್ವಯ ಒಂದು ಸರ್ಕಾರಿ ಇಲಾಖೆ ಹಾಗೂ ಒಂದು ಎಜುಕೇಷನ್ ಟ್ರಸ್ಟ್ ಇವರು ಸಿ.ಎ. ನಿವೇಶನವನ್ನು ಕೋರಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಇಲಾಖೆಗಳಿಂದ ಬಂದ ಕೋರಿಕೆ	ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯ	ಷರಾ
1.	ಕಾರ್ಯಪಾಲಕ ಇಂಜಿಯನಿಯರ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರು ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ	ವಿಷಯವನ್ನು ಹಿಂದಿನ ಸಭೆಯಲ್ಲಿ ಚರ್ಚಿಸಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರಿಗೆ ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಬಹುದೆಂದು ಹಿಂದಿನ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.	ಸದರಿ ಸಿ.ಎ. ನಿವೇಶನದ ಖಾತೆ (ನಮೂನೆ–9&11) ಅನ್ನು ಕೂಡಲೇ ಮಾಡಿಕೊಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರನ್ನು ದಿನಾಂಕ: 31–08–2024 ಕೋರಲಾಗಿದೆ.
2.	ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ), ಕುಶಾಲನಗರ ಇವರ ಶಿಕ್ಷಣಸಂಸ್ಥೆ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿದ್ದು ಆಟದ ಮೈದಾನ ಮತ್ತು ತರಗತಿ ಕೊಠಡಿ ಕೊರತೆಯಿರುವುದರಿಂದ ಗುಂಡುರಾವ್	ಸದರಿ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ಸಭೆಯಲ್ಲಿ ನಿರ್ಣಯಿಸಿರುವುದರಿಂದ ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ), ಕುಶಾಲನಗರ ಇವರು ಪ್ರಾಧಿಕಾರದಿಂದ ಪ್ರಕಟಣೆ ಹೊರಡಿಸಿದ ನಂತರ ಬೇರೆ ಸಿ.ಎ ನಿವೇಶನವನ್ನು ಕೋರಿದ್ದಲ್ಲಿ ಹಂಚಿಕೆ ಮಾಡಬಹುದೆಂದು ಹಿಂದಿನ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.	ಸಭೆಯ ನಿರ್ಣಯದಂತೆ ಮುಖ್ಯಾಧಿಕಾರಿಗಳಿಗೆ ದಿನಾಂಕ:26–08–2024 ರಂದು ಪತ್ರ ಬರೆದು ಸಿ.ಎ ನಿವೇಶನವನ್ನು ಹಂಚಿಕೆ ಮಾಡಲು ಸಾರ್ವಜನಿಕ ಪ್ರಕಟಣೆ ಹೊರಡಿಸಿದ ನಂತರ ಪಟ್ಟಿಯಲ್ಲಿರುವ ಬೇರೆ ಸಿ.ಎ. ನಿವೇಶನವನ್ನು ಕೋರಿದ್ದಲ್ಲಿ ಮುಂದಿನ ಕ್ರಮವಹಿಸಬಹುದಾಗಿದೆ

	ಬಡಾವಣೆಯಲ್ಲಿನ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಕೋರಿದ್ದು, ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಕೋರಿರುತ್ತಾರೆ.		ಎಂದು ತಿಳಿಸಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಮತ್ತು ಮುಖ್ಯಾಧಿಕಾರಿಗಳು ಪುರಸಭೆ ಇವರುಗಳಿಂದ ಖಾತೆ ನೊಂದಣಿಯಾದ ನಂತರ 2024–25ನೇ ಸಾಲಿಗೆ ಸಾರ್ವಜನಿಕ ಪ್ರಕಟಣೆಯನ್ನು ನೀಡಿ ಮುಂದಿನ ಕ್ರಮವಹಿಸಲಾಗುವುದು.

ಹೊಸದಾಗಿ ಸಿ.ಎ. ನಿವೇಶನಗಳನ್ನು ಕೋರಿ ಬಂದಿರುವ ಪ್ರಸ್ತಾವನೆಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಇಲಾಖೆಗಳಿಂದ ಬಂದ ಕೋರಿಕೆ	ಸದಸ್ಯಕಾರ್ಯದರ್ಶಿ ಅಭಿಪ್ರಾಯ
1	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ತಾಲ್ಲೂಕು ಇವರು ಶ್ರೀ ದೇವರಾಜು ಅರಸು ಭವನ ನಿರ್ಮಾಣ ಮಾಡಲು ನಾಗರೀಕ ಸೌಲಭ್ಯದ ನಿವೇಶನ ಅಥವಾ 40 ಸೆಂಟ್ ಜಾಗವನ್ನು ಹಿಂದುಳಿದ ವರ್ಗಗಳ ಇಲಾಖೆಗೆ ಕಾಯ್ದಿರಿಸಿ ಕೊಡಬೇಕೆಂದು ಕೋರಿರುತ್ತಾರೆ.	40 ಸೆಂಟ್ಸ್ ಅಳತೆಯ ಸಿ.ಎ. ನಿವೇಶನ ಪ್ರಾಧಿಕಾರದಲ್ಲಿ ಲಭ್ಯವಿಲ್ಲದ ಕಾರಣ, ಸದರಿಯವರಿಗೆ ಕೂಡ್ಲೂರು ಗ್ರಾಮದ ಸ.ನಂ. 60/2 ರ 1401.46 ಚ.ಮೀ (34.6 ಸೆಂಟ್ಸ್) ಸಿ.ಎ ನಿವೇಶನವನ್ನು ಹಂಚಿಕೆ ಮಾಡಬಹುದಾಗಿರುತ್ತದೆ.
2	ಹಿರಿಯ ಉಪನೋಂದಣಾಧಿಕಾರಿ, ಕುಶಾಲನಗರ ಇವರು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವ 2400 ಚದರ ಅಡಿ ಅಳತೆಯ ಸಿ.ಎ. ನಿವೇಶನವನ್ನು ಉಪನೊಂದಣಿ ಕಛೇರಿಗೆ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.	2400 ಚದರ ಅಡಿ ಅಳತೆಯ ಸಿ.ಎ. ನಿವೇಶನ ಪ್ರಾಧಿಕಾರದಲ್ಲಿ ಲಭ್ಯವಿಲ್ಲದ ಕಾರಣ, ಸದರಿಯವರಿಗೆ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/4 ರ 348.37 ಚ.ಮೀ ಸಿ.ಎ ನಿವೇಶನ ಅಥವಾ ಬೈಚನಹಳ್ಳಿ ಗ್ರಾಮದ ಸ.ನಂ. 89/5 ರ 226.61 ಚ.ಮೀ ಸಿ.ಎ ನಿವೇಶನವನ್ನು ಹಂಚಿಕೆ ಮಾಡಬಹುದಾಗಿರುತ್ತದೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಸದಸ್ಯಕಾರ್ಯದರ್ಶಿಗಳ ಅಭಿಪ್ರಾಯದ ಪ್ರಕಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ಇವರಿಗೆ ಮತ್ತು ಹಿರಿಯ ಉಪನೋಂದಣಾಧಿಕಾರಿ, ಕುಶಾಲನಗರ ಇವರಿಗೆ ಪತ್ರ ಬರೆಯಬೇಕೆಂದು ಹಾಗೂ ಈಗಾಗಲೇ ಕೋರಿಕೆ ಸಲ್ಲಿಸಿರುವ ಇಲಾಖೆಗಳಿಗೆ ಸಿ.ಎ. ನಿವೇಶನ ಹಂಚಿಕೆ ಮಾಡಬೇಕೆಂದು ಸಭೆಯಲ್ಲಿ ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(4): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಲ್ಲಿ "0.20 ಸೆಂಟ್ಸ್ ವರೆಗಿನ ವಿಸ್ತೀರ್ಣಕ್ಕೆ ಏಕ–ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಮತ್ತು ನಿವೇಶನಗಳ ವಿಭಜನೆ/ಒಟ್ಟುಗೂಡಿಸುವಿಕೆಗೆ ಸಂಬಂಧಿಸಿದ ಕಡತಗಳನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಮಂಡಿಸಿ, ಕಡತದಲ್ಲಿ ಅನುಮೋದನೆ ಪಡೆದ ನಂತರ ಸದಸ್ಯ ಕಾರ್ಯದರ್ಶಿಗಳ ಹಂತದಲ್ಲಿ ಅನುಮೋದನೆ ನೀಡುವಂತೆ ಹಾಗೂ ಇಂತಹ ಪ್ರಕರಣಗಳನ್ನು ಮುಂದಿನ ಪ್ರಾಧಿಕಾರದ ಸಭೆಗೆ ಸ್ಥಿರೀಕರಣಕ್ಕಾಗಿ

ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ". ಅದರಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕೆ ಮಂಡಿಸಿದೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 95/7 (ಮೂಲ ಸ.ನಂ. 95/1,95/3, 95/6) ರಲ್ಲಿ 0.04.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:–ಶ್ರೀ ನಾರಾಯಣ ಟಿ.ಎಂ**)

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಆದೇಶ ಸಂಖ್ಯೆ: 572758 ದಿನಾಂಕ:17–01–2024 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಉತ್ತರ ದಿಕ್ಕಿನಲ್ಲಿ 5.00ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಮಹಾಯೋಜನೆಯಂತೆ 12.00ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇ.ಸಿ.(ನಮೂನೆ–16) ಪ್ರತಿ, ಮ್ಯುಟೇಷನ್ ಪ್ರತಿಗಳು, ಆಧಾರ್‌ಕಾರ್ಡ್, ಆಕಾರ್‌ಬಂದ್ (ಉತಾರು), ಕ್ರಯಪತ್ರ, ಇ.ಸಿ ಪ್ರತಿ (ನಮೂನೆ–15), ಉತಾರು ನಕ್ಷೆ, ಆರ್.ಟಿ.ಸಿ, ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 140.63 ಚ.ಮೀ (ಶೇ. 77.24%) ಮತ್ತು ರಸ್ತೆ ವಿಸ್ತರಣೆಗಾಗಿ 41.45 (ಶೇ.22.76%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 95/7 (ಮೂಲ ಸ.ನಂ. 95/1,95/3, 95/6) ರಲ್ಲಿ 0.04.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ:18–07–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 66/3 ರಲ್ಲಿ 0.13 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:–ಶ್ರೀ ಕೆ.ಆರ್. ಮಣಿ ಮತ್ತು ಶ್ರೀಮತಿ ಪಿ.ವಿ. ಸುಧಾ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಸಂಖ್ಯೆ: 628980 ದಿನಾಂಕ:13–05–2024 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಪ್ರಸ್ತಾವಿತ ಜಮೀನಿಗೆ ನೇರ ರಸ್ತೆ ಸಂಪರ್ಕ ಇರುವುದಿಲ್ಲ. ಆದರೆ ಜಮೀನಿನ ಮುಂಭಾಗದಲ್ಲಿ ಬಫರ್ ವಲಯದ ದಕ್ಷಿಣ ದಿಕ್ಕಿನಲ್ಲಿ 7.0ಮೀ ಅಗಲದ ರಸ್ತೆಯಿದ್ದು, ಸದರಿ ರಸ್ತೆಯಿಂದ ಸಂಪರ್ಕ ಹೊಂದಬಹುದಾಗಿದೆ. ಸದರಿ ರಸ್ತೆಯನ್ನು ಮಹಾಯೋಜನೆಯಂತೆ 18.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಅಲಿನೇಷನ್ ನಕ್ಷೆ, ಇ.ಸಿ. ಪ್ರತಿ, ಅಫಿಡೆವಿಟ್ ಮ್ಯುಟೇಷನ್ ಪ್ರತಿ, ಆಧಾರ್‌ಕಾರ್ಡ್, ಪಿ.ಟಿ. ಶೀಟ್, ಆಕಾರ್‌ಬಂದ್ (ಉತಾರು), ಕ್ರಯಪತ್ರ, ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 517.64 ಚ.ಮೀ (ಶೇ. 100.0%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮಾದಾಪಟ್ಟಣ ಗ್ರಾಮದ ಸ.ನಂ. 66/3 ರಲ್ಲಿ 0.13 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ: 24–07–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 9/5 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ **(ಅರ್ಜಿದಾರರು:–ಶ್ರೀ ಮಧುಚಂದ್ರ ಪಿ.ಕೆ)**.

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಸಂಖ್ಯೆ:ಭೂಪರಿ/120/2009–10 ದಿನಾಂಕ: 03–08–2009 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 9/1ಪಿ1 ರಲ್ಲಿ 0.25 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ. ನಂತರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 630332 ದಿನಾಂಕ: 18–04–2024 ರಲ್ಲಿ ಬೈಚನಹಳ್ಳಿ ಗ್ರಾಮದ ಸ.ನಂ. 9/5 ರಲ್ಲಿ 0.10 ಎಕರೆ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ತದನಂತರ ಉಪವಿಭಾಗಾಧಿಕಾರಿಯವರ ನ್ಯಾಯಾಲಯ, ಮಡಿಕೇರಿ ಉಪವಿಭಾಗ ಇವರ ಆದೇಶ ಸಂಖ್ಯೆ: ರೆಅ/07/2024–25 ದಿನಾಂಕ:18–07–2024 ರಲ್ಲಿ ಉಪವಿಭಾಗಾಧಿಕಾರಿಯವರ ನ್ಯಾಯಲಯದ ಆದೇಶದಲ್ಲಿ ದಿ:03–08–2009 ರ ಆದೇಶವನ್ನು ಬದಿಗೊತ್ತಿ 18–04–2024 ರ ಆದೇಶವನ್ನು ಪುರ್ನಸ್ಥಾಪಿಸಲು ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಪ್ರಸ್ತಾವಿತ ಪಶ್ಚಿಮ ದಿಕ್ಕಿನಲ್ಲಿ ಹಾಲಿ 8.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸದರಿ ರಸ್ತೆಯನ್ನು ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಆಕಾರ್‌ಬಂದ್ (ಉತಾರು), ಪಿ.ಟಿ. ಶೀಟ್, ಮ್ಯುಟೇಷನ್ ಪ್ರತಿ, ಆರ್.ಟಿ.ಸಿ, ಆಧಾರ್‌ಕಾರ್ಡ್, ಇ.ಸಿ. ಪ್ರತಿ, ಅಫಿಡೆವಿಟ್, ಕ್ರಯಪತ್ರ, ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 368.17 ಚ.ಮೀ (ಶೇ. 90.96%) ಮತ್ತು ರಸ್ತೆ ವಿಸ್ತರಣೆಗಾಗಿ 36.58 (ಶೇ.9.04%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಬೈಚನಹಳ್ಳಿ ಗ್ರಾಮದ ಸ.ನಂ. 9/5 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ:19–08–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ:– ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ(05): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ಜಗನ್ನಾಥ್ ಮತ್ತು ಶ್ರೀಮತಿ ಸುಂದ್ರಮ್ಮ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಜಮೀನಿಗೆ ಬಡಾವಣೆ ನಕ್ಷೆಯನ್ನು ಅನುಮೋದನೆ ಮಾಡಿಕೊಡುವಂತೆ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಹಿಂದೆ ದಿನಾಂಕ:14–02–2024 ರಂದು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಸ.ನಂ. 96/23 ರ 0.30 ಎಕರೆ ಜಮೀನು ಭೂಪರಿವರ್ತನೆಗೊಂಡಿರುವುದಿಲ್ಲ. ಆದ್ದರಿಂದ ದಿನಾಂಕ: 23–02–2024 ರಂದು ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ಕೇವಲ ಸ.ನಂ. 96/24 ರ 2.70 ಎಕರೆ ವಿಸ್ತೀರ್ಣದ ಜಮೀನು ಮಾತ್ರ ಭೂಪರಿವರ್ತನೆ ಆಗಿರುತ್ತದೆ. ಆದರೆ ಸ.ನಂ. 96/23 ರ 0.30 ಎಕರೆ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆ ಆದೇಶದ ಪ್ರತಿಯನ್ನು ಸಲ್ಲಿಸಿರುವುದಿಲ್ಲ. ಅರ್ಜಿದಾರರು ಸ.ನಂ. 96/23 ರ 0.30 ಎಕರೆ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆ ಆದೇಶವನ್ನು ಪಡೆದುಕೊಂಡಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸ.ನಂ. 96/23 ರ 0.30 ಎಕರೆ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆ ಆದೇಶ ಪಡೆದ ನಂತರ ಸದರಿ ಪ್ರಸ್ತಾವನೆಯನ್ನು ಮರುಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಮುಂದುವರೆದು, ಅರ್ಜಿದಾರರು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ಮತ್ತು 96/23 ರಲ್ಲಿ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಅದನ್ನು ಗಮನಿಸಿ, ಸದರಿ ಜಮೀನಿಗಳ ಸ್ಥಳಪರಿಶೀಲನೆಯನ್ನು ಮಾಡಲಾಗಿದ್ದು, ಪ್ರಾಧಿಕಾರದಿಂದ

ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯದೇ ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಉದ್ಯಾನವನಕ್ಕೆ ವಿಸ್ತೀರ್ಣ ಕಾಯ್ದಿರಿಸಿ ನಿವೇಶನಗಳ ವಿಂಗಡಣೆ ಹಾಗೂ ರಸ್ತೆ ಅಭಿವೃದ್ಧಿ ಹಂತದಲ್ಲಿರುವುದು ಕಂಡುಬಂದಿದೆ. ಆದ್ದರಿಂದ ಜಮೀನಿನ ಮಾಲೀಕರುಗಳಿಗೆ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣದಿಂದ ಸ್ಥಗಿತಗೊಳಿಸುವಂತೆ ದಿನಾಂಕ:06–05–2024 ರಂದು ಈ ಕಛೇರಿಯಿಂದ ನೋಟೀಸ್ ನೀಡಲಾಗಿರುತ್ತದೆ ಹಾಗೂ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 17(4) ರನ್ವಯ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಸದರಿ ನೋಟೀಸ್‌ಗೆ ಅರ್ಜಿದಾರರು ದಿನಾಂಕ:13–05–2024 ರಂದು ಮನವಿ ಸಲ್ಲಿಸಿ, ತಾವು ನೋಟೀಸ್ ನೀಡಿದ್ದು, ಅದರ ಅನ್ವಯ ಕಾಮಗಾರಿ ಈಗಾಗಲೇ ಸ್ಥಗಿತಗೊಳಿಸಿದ್ದು ಮುಂದಿನ ದಿನಗಳಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ನಡೆಸುತ್ತೇವೆಂದು ಕೋರಿರುತ್ತಾರೆ.

ನಂತರ ಅರ್ಜಿದಾರರು ಸ.ನಂ. 96/23 ರಲ್ಲಿ 0.30 ಎಕರೆ ವಿಸ್ತೀರ್ಣದ ಜಮೀನಿಗೆ ಭೂಪರಿವರ್ತನೆ ಕೋರಿ ಆನ್‌ಲೈನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯ ನೀಡುವಾಗ ಮಾನ್ಯ ಜಿಲ್ಲಾಧಿಕಾರಿಗಳಿಗೆ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣಗಳನ್ನು ಒಟ್ಟುಗೂಡಿಸಿಕೊಂಡು ಬಡಾವಣೆ ನಿರ್ಮಿಸುವ ಪ್ರಸ್ತಾವನೆಯನ್ನು ಅರ್ಜಿದಾರರು ಈ ಕಛೇರಿಗೆ ಸಲ್ಲಿಸಿರುವ ಬಗ್ಗೆ ಮತ್ತು ಅನಧಿಕೃತವಾಗಿ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ ಹಾಗೂ ಪ್ರಾಧಿಕಾರದಿಂದ ಅರ್ಜಿದಾರರಿಗೆ ನೋಟೀಸ್ ನೀಡಿರುವ ಬಗ್ಗೆ ಸಂಪೂರ್ಣ ವಿವರಣೆಯನ್ನು ನೀಡಲಾಗಿರುತ್ತದೆ.

ದಿನಾಂಕ:18–07–2024 ರಂದು ಅರ್ಜಿದಾರರಿಂದ ಪ್ರಮಾಣ ಪತ್ರಗಳನ್ನು ಪಡೆದಿದ್ದು, ಅದರಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ನಾವುಗಳು ಮೇಲ್ಕಾಣಿಸಿದ ಸ.ನಂ. 96/23 ರಲ್ಲಿ 0.30 ಎಕರೆ ಮತ್ತು ಸ.ನಂ. 96/24 ರಲ್ಲಿನ 2.70 ಎಕರೆ ಎರಡು ಜಮೀನುಗಳನ್ನು ಸೇರಿಸಿ ಒಟ್ಟು 3.00 ಎಕರೆ ಜಮೀನನ್ನು ಜಂಟಿಯಾಗಿ ಅಭಿವೃದ್ಧಿ ಪಡಿಸಲು ಬಯಸಿರುತ್ತೇವೆಂದು, ಮೇಲ್ಕಾಣಿಸಿದ ಜಮೀನುಗಳನ್ನು ಭೂ–ಪರಿವರ್ತಿಸಿದ ನಂತರ ಜಂಟಿಯಾಗಿ ಅಭಿವೃದ್ಧಿಪಡಿಸುತ್ತೇನೆಂದು ಹಾಗೂ ಸದರಿ ಜಮೀನುಗಳಿಗೆ ಪ್ರಾಧಿಕಾರದಿಂದ ಜಂಟಿಯಾಗಿ ವಿನ್ಯಾಸ ನಕ್ಷೆ ಅನುಮೋದನೆ ಪಡೆಯುತ್ತೇನೆಂದು ಪ್ರಮಾಣೀಕರಿಸಿರುತ್ತಾರೆ.

ಸದರಿ ಜಮೀನಿನ ಸ್ಥಳಪರಿಶೀಲನೆ ಮತ್ತೊಮ್ಮೆ ಮಾಡಲಾಗಿದೆ. ಸದರಿ ಜಮೀನಿಗೆ ಸ.ನಂ. 96/24 ರ ಜಮೀನಿನ ಮೂಲಕ 18.0ಮೀ ಅಗಲದ ಹಾರಂಗಿ ರಸ್ತೆಯಿಂದ ಸಂಪರ್ಕ ಪಡೆಯಬಹುದಾಗಿದ್ದು, ಅರ್ಜಿದಾರರು ಸಲ್ಲಿಸಿರುವ ಅಫಿಡೆವಿಟ್‌ನಂತೆ ಗುಮ್ಮನಕೊಲ್ಲಿ ಗ್ರಾಮದ 96/23 ರಲ್ಲಿ 0.30 ಎಕರೆ ಮತ್ತು ಸ.ನಂ. 96/24 ರಲ್ಲಿ 2.70 ಎಕರೆ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಪ್ರಾಧಿಕಾರದಿಂದ ನಿಯಮಾನುಸಾರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯುವ ಷರತ್ತಿಗೊಳಪಡಿಸಿ ಮತ್ತು ವಿನ್ಯಾಸ ಅನುಮೋದನೆ ಸಂದರ್ಭ ರಸ್ತೆಯ ಅಗಲೀಕರಣಕ್ಕೆ ಜಮೀನಿನಲ್ಲಿ ಸ್ಥಳ ಬಿಟ್ಟುಕೊಡುವ ಷರತ್ತಿಗೊಳಪಡಿಸಿ ಹಾಗೂ ಸದರಿ ಜಮೀನಿನಲ್ಲಿ ಈಗಾಗಲೇ ಅಭಿವೃದ್ಧಿ ಕಾರ್ಯಕೈಗೊಂಡಿರುವುದರಿಂದ ಕಂದಾಯ ಇಲಾಖೆಯ ಕಾನೂನಿನ್ವಯ ದಂಡ ಪಾವತಿಸಿಕೊಂಡು, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/23 ರಲ್ಲಿ 0.30 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ (ಲೇಔಟ್) ಉದ್ದೇಶಕ್ಕೆ ಭೂ–ಪರಿವರ್ತನೆ ಮಾಡಬಹುದಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿನಾಂಕ:19–07–2024 ರಂದು ಈ ಕಛೇರಿಯಿಂದ ಅಭಿಪ್ರಾಯ ನೀಡಲಾಗಿದೆ.

ಮಾನ್ಯ ಜಿಲ್ಲಾಧಿಕಾರಿಗಳು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 693649 ದಿನಾಂಕ:30–08–2024 ರಲ್ಲಿ ಸ.ನಂ. 96/23 ರ 0.30 ಎಕರೆ ಜಮೀನನ್ನು ವಸತಿ (Residential-Layout) ಉದ್ದೇಶಕ್ಕೆ ರೂ. 15,676=00 ಗಳನ್ನು ದಂಡ ವಿಧಿಸಿ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಆದೇಶ ಪತ್ರವನ್ನು ಅರ್ಜಿದಾರರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಮುಖ್ಯಾಧಿಕಾರಿಗಳು ದಿನಾಂಕ:02–09–2024 ರಂದು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಸಂಬಂಧ ಅರ್ಜಿದಾರರಿಗೆ ಅವಶ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಹಿಂಬರಹ ನೀಡಲಾಗಿದ್ದು, ಅರ್ಜಿದಾರರು ಈ ಕೆಳಕಂಡ ದಾಖಾತಿಗಳನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಪ್ರಶ್ನಿತ ಜಮೀನುಗಳ ಜಮಾಬಂದಿ, Register of grant land, ಮ್ಯುಟೇಷನ್ ರಿಜಿಸ್ಟರ್, ಅಲಿನೇಷನ್ ನಕ್ಷೆ, ಮ್ಯುಟೇಷನ್ ಪ್ರತಿಗಳು, ಇತ್ತೀಚಿನ ಆರ್.ಟಿ.ಸಿ, ಪೌತಿ ಖಾತೆ ಬದಲಾವಣೆ ಪತ್ರ, ಮರಣ ಶಾಸನಪತ್ರ, ಕಾಳಮ್ಮ ಇವರ ಮರಣ ಪ್ರಮಾಣ ಪತ್ರ, ಇ.ಸಿ. ಪ್ರತಿ (ಮರಣ ಪ್ರಮಾಣ ಪತ್ರ ದಿನಾಂಕದಿಂದ ಇಲ್ಲಿಯವರೆಗೆ), ಸರ್ವೆ ನಕ್ಷೆ (ಸ.ನಂ. 96/24 ಮತ್ತು ಸ.ನಂ. 96/23 ರಲ್ಲಿನ ಒಟ್ಟು 3.00 ಎಕರೆ ಜಮೀನುಗಳನ್ನು ಒಟ್ಟುಗೂಡಿಸಿರುವ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ನಕ್ಷೆ), ಪಿ.ಟಿ.ಶೀಟ್, ಟೋಟಲ್ ಸ್ಟೇಷನ್ ನಕ್ಷೆ, ಅಫಿಡೆವಿಟ್, ಆಕಾರ್‌ಬಂದ್ (ಉತಾರು), ಆಧಾರ್‌ಕಾರ್ಡ್ ಮತ್ತು ಸದರಿ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಖಾತೆ ವಿತರಣೆಯಾಗಿಲ್ಲದಿರುವ ಬಗ್ಗೆ ಮುಖ್ಯಾಧಿಕಾರಿ, ಪುರಸಭೆ ಇವರಿಂದ ದೃಢೀಕರಣ ಪತ್ರ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 583254 ದಿನಾಂಕ: 08–02–2024 ಮತ್ತು ಸಂಖ್ಯೆ: 693649 ದಿನಾಂಕ: 30–08–2024 ರಂದು ವಸತಿ (Residential-Layout) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸ.ನಂ. 96/24 ರ 2.70 ಎಕರೆ ಜಮೀನು ಪೂರ್ವ ದಿಕ್ಕಿನಲ್ಲಿ ಹಾರಂಗಿ ರಸ್ತೆಯಿಂದ ಸಂಪರ್ಕಹೊಂದಿದೆ.

ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	6656.21	54.83
2	ಉದ್ಯಾನವನ ಮತ್ತು ಆಟದ ಮೈದಾನ	1215.63	10.01
3	ನಾಗರೀಕ ಸೌಲಭ್ಯ	609.11	5.02
4	ರಸ್ತೆಗಾಗಿ	3659.61	30.14
	ಒಟ್ಟು	12140.56	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.14 X 15.24	03
2	9.14 X 12.20	25
2	9.0 X ಅನಿಯತ	02
3	ಅನಿಯತ ನಿವೇಶನಗಳು (ಅ)	22
	ಒಟ್ಟು	52

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ವಿವರಣೆ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ವಿವರ	ಕೈಗೊಂಡ ಕ್ರಮ
1	ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ದಿನಾಂಕ:14–02–2024 ರಂದು ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.	ಸ.ನಂ. 96/23 ರ 0.30 ಎಕರೆ ಜಮೀನು ಭೂಪರಿವರ್ತನೆಗೊಂಡಿರುವುದಿಲ್ಲ. ಅರ್ಜಿದಾರರು ಸ.ನಂ. 96/23 ರ 0.30 ಎಕರೆ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆ ಆದೇಶವನ್ನು ಪಡೆದುಕೊಂಡಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ, ಆದ್ದರಿಂದ ಸ.ನಂ. 96/23 ರ 0.30 ಎಕರೆ ವಿಸ್ತೀರ್ಣದ ಜಮೀನಿನ ಭೂಪರಿವರ್ತನೆ ಆದೇಶ ಪಡೆದ ನಂತರ ಸದರಿ ಪ್ರಸ್ತಾವನೆಯನ್ನು ಮರುಸಲ್ಲಿಸುವಂತೆ ದಿನಾಂಕ: 23–02–2024 ರಂದು ಮುಖ್ಯಾಧಿಕಾರಿಗಳಿಗೆ ಪತ್ರ ತಿಳಿಸಲಾಗಿದೆ.
2	ಅರ್ಜಿದಾರರು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 96/24 ಮತ್ತು 96/23 ರಲ್ಲಿ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.	ಸದರಿ ಜಮೀನಿಗಳ ಸ್ಥಳಪರಿಶೀಲನೆಯನ್ನು ಮಾಡಿ, ದಿನಾಂಕ:06–05–2024 ರಂದು **ಈ ಕಛೇರಿಯಿಂದ ಅರ್ಜಿದಾರರಿಗೆ ನೋಟೀಸ್ ನೀಡಿದ್ದು, ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ, ಈ ಹಿನ್ನಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣದಿಂದ ಸ್ಥಗಿತಗೊಳಿಸಲು ಸೂಚಿಸಲಾಗಿದೆ ಹಾಗೂ ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಗಿದೆ. ತಪ್ಪಿದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 17(4) ರನ್ವಯ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.**
3	ಸದರಿ ನೋಟೀಸ್‌ಗೆ ಅರ್ಜಿದಾರರು ದಿನಾಂಕ:13–05–2024 ರಂದು ಮನವಿ ಸಲ್ಲಿಸಿ, ತಾವು ನೋಟೀಸ್ ನೀಡಿದ್ದು, ಅದರ ಅನ್ವಯ ಕಾಮಗಾರಿ ಈಗಾಗಲೇ ಸ್ಥಗಿತಗೊಳಿಸಿದ್ದು ಮುಂದಿನ ದಿನಗಳಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ನಡೆಸುತ್ತೇವೆಂದು ಕೋರಿರುತ್ತಾರೆ.	———
4	ಅರ್ಜಿದಾರರು ಸ.ನಂ. 96/23 ರಲ್ಲಿ 0.30 ಎಕರೆ ವಿಸ್ತೀರ್ಣದ ಜಮೀನಿಗೆ ಭೂಪರಿವರ್ತನೆ ಕೋರಿ ಆನ್‌ಲೈನ್ ತಂತ್ರಾಂಶದಲ್ಲಿ ದಿನಾಂಕ:27–06–2024 ರಂದು ಅರ್ಜಿ ಸಲ್ಲಿಸಿರುತ್ತಾರೆ.	ಸದರಿ ಅರ್ಜಿಗೆ ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯ ನೀಡುವಾಗ ಮಾನ್ಯ ಜಿಲ್ಲಾಧಿಕಾರಿಗಳಿಗೆ ಸ.ನಂ. 96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣಗಳನ್ನು ಒಟ್ಟುಗೂಡಿಸಿಕೊಂಡು ಬಡಾವಣೆ ನಿರ್ಮಿಸುವ ಪ್ರಸ್ತಾವನೆಯನ್ನು ಅರ್ಜಿದಾರರು ಈ ಕಛೇರಿಗೆ ಸಲ್ಲಿಸಿರುವ ಬಗ್ಗೆ ಮತ್ತು ಅನಧಿಕೃತವಾಗಿ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ ಹಾಗೂ ಪ್ರಾಧಿಕಾರದಿಂದ ಅರ್ಜಿದಾರರಿಗೆ ನೋಟೀಸ್ ನೀಡಿರುವ ಬಗ್ಗೆ ಸಂಪೂರ್ಣ ವಿವರಣೆಯನ್ನು ನೀಡಿ ದಂಡ ವಿಧಿಸಿ ಭೂಪರಿವರ್ತಿಸಲು ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿರುತ್ತದೆ.
5	ಮುಖ್ಯಾಧಿಕಾರಿಗಳು ದಿನಾಂಕ:02–09–2024 ರಂದು ಮುಳ್ಳುಸೋಗೆ ಗ್ರಾಮದ ಸ.ನಂ.	ಈ ಸಂಬಂಧ ಅರ್ಜಿದಾರರಿಗೆ ಅವಶ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಹಿಂಬರಹ ನೀಡಿದ್ದು, ಅರ್ಜಿದಾರರಿಂದ

	96/24 ರಲ್ಲಿ 2.70 ಎಕರೆ ಮತ್ತು ಸ.ನಂ. 96/23 ರಲ್ಲಿ 0.30 ಎಕರೆ ಒಟ್ಟು 3.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಬಡಾವಣೆಗೆ ಅನುಮೋದನೆ ನೀಡಲು ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.	ಅವಶ್ಯ ದಾಖಲಾತಿಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಪಡೆಯಲಾಗಿದೆ.

ಸ್ಥಳಪರಿಶೀಲನೆ ವಿವರ: ಸ್ಥಳದಲ್ಲಿ ಈಗಾಗಲೇ ಉದ್ಯಾನವನಕ್ಕೆ ವಿಸ್ತೀರ್ಣ ಕಾಯ್ದಿರಿಸಿ, ನಿವೇಶನಗಳ ವಿಂಗಡಣೆ, ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಂಡಿರುತ್ತಾರೆ. ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯಲ್ಲಿ ನಾಗರೀಕ ಸೌಲಭ್ಯದ ನಿವೇಶನಕ್ಕೆ 9.0ಮೀ ಅಗಲದ ರಸ್ತೆಯನ್ನು ಅಳವಡಿಸಿರುತ್ತಾರೆ.

ಪ್ರಶ್ನಿತ ಜಮೀನು 18.0ಮೀ ಅಗದ ಹಾರಂಗಿ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸದರಿ ರಸ್ತೆಯ ಅಕ್ಕಪಕ್ಕ ಬೆಳವಣಿಗೆಗಳು ಹೆಚ್ಚುತ್ತಿದ್ದು, ಅಭಿವೃದ್ಧಿಹೊಂದುತ್ತಿರುತ್ತದೆ. ಪ್ರಶ್ನಿತ ಜಮೀನಿನ ಸಿ.ಎ. ನಿವೇಶನವನ್ನು ಮುಂದೆ ಹಂಚಿಕೆ ಮಾಡಿದಾಗ ವಾಹನದಟ್ಟಣೆ ಹೆಚ್ಚಾಗಿ ಪಾರ್ಕಿಂಗ್ ಸಮಸ್ಯೆ ಉಂಟಾಗುತ್ತದೆ. ನಗರ ಯೋಜನಾ ತತ್ವದನ್ವಯ ಸಿ.ಎ. ನಿವೇಶನಗಳಿಗೆ 12.0ಮೀ ಅಗಲದ ರಸ್ತೆಯನ್ನು ಅಳವಡಿಸಿದ್ದಲ್ಲಿ, ಸಿ.ಎ. ನಿವೇಶನವನ್ನು ಲೀಜ್‌ಗೆ ನೀಡುವ ಸಂದರ್ಭ ಸದರಿ ನಿವೇಶನದಲ್ಲಿ ಅಭಿವೃದ್ಧಿಗೊಳ್ಳುವ ಸಾರ್ವಜನಿಕ ಉದ್ದೇಶದ ಕಟ್ಟಡದಿಂದ ಆಗಬಹುದಾದ ವಾಹನ ದಟ್ಟಣೆ ಹಾಗೂ ಪಾರ್ಕಿಂಗ್ ಸಮಸ್ಯೆಯನ್ನು ನಿವಾರಿಸಬಹುದಾಗಿರುತ್ತದೆ.

ಉದಾಹರಣೆಗೆ, ಚಿಕ್ಕಣ್ಣ ಬಡಾವಣೆಯಲ್ಲಿನ ಸಿ.ಎ. ನಿವೇಶನವು ರಾಜ್ಯ ಹೆದ್ದಾರಿಗೆ ಸಮೀಪದಲ್ಲಿದ್ದು, ನಾಲ್ಕು ದಿಕ್ಕುಗಳಲ್ಲಿ ರಸ್ತೆ ಹೊಂದಿರುವುದರಿಂದ ಪಾರ್ಕಿಂಗ್ ಸಮಸ್ಯೆ ಹಾಗೂ ವಾಹನ ದಟ್ಟಣೆ ಹೆಚ್ಚಾಗದ ರೀತಿಯಲ್ಲಿ ಪೋಲೀಸ್ ಇಲಾಖೆಯು ಸಂಚಾರಿ ಪೋಲೀಸ್ ಠಾಣೆ ನಿರ್ಮಿಸಲು ಚಿಕ್ಕಣ್ಣ ಬಡಾವಣೆಯಲ್ಲಿನ ಸಿ.ಎ. ನಿವೇಶನವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಆದ್ದರಿಂದ ಅರ್ಜಿದಾರರಿಗೆ ಹಿಂಬರಹ ನೀಡಿ, ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಲು ಹಿಂಬರಹ ನೀಡಲಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಚರ್ಚೆ: ಸಭೆಯಲ್ಲಿ ಸದಸ್ಯಕಾರ್ಯದರ್ಶಿಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17(4) ರಲ್ಲಿ **ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಮಂಜೂರಾತಿಯಲ್ಲಿರುವ ಮಾರ್ಪಾಟುಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಅಥವಾ ಸದರಿ (2)ನೇ ಉಪಪ್ರಕರಣದ ಮೇರೆಗಿನ ಮಂಜೂರಾತಿಯನ್ನು ನಿರಾಕರಿಸಿದ್ದರೂ ಯಾವುದೇ ಕಾಮಗಾರಿಯನ್ನು ಮಾಡಿದರೆ, ಯೋಜನಾ ಪ್ರಾಧಿಕಾರವು, ಲಿಖಿತ ನೋಟೀಸಿನ ಮೂಲಕ ಅಂಥ ವ್ಯಕ್ತಿಗೆ ನಡೆಯುತ್ತಿರುವ ಯಾವುದೇ ಕಾಮಗಾರಿಯನ್ನು ನಿಲ್ಲಿಸಲು ನಿರ್ದೇಶಿಸಬಹುದು ಮತ್ತು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಯಾವುದೇ ಕಾಮಗಾರಿಯನ್ನು ತೆಗೆದುಹಾಕಬಹುದು ಅಥವಾ ಕೆಡವಿ ಹಾಕಬಹುದು ಅಥವಾ ಆ ಭೂಮಿಯನ್ನು ಅದರ ಮೂಲಸ್ಥಿತಿಗೆ ತರಬಹುದು** ಎಂಬುದಾಗಿ ಇರುತ್ತದೆ ಎಂದು ತಿಳಿಸುತ್ತಾರೆ.

ಅದರನ್ವಯ ಯೋಜನಾ ಪ್ರಾಧಿಕಾರಗಳಿಗೆ ಯಾವುದೇ ಕಾಮಗಾರಿಯನ್ನು ನಿಲ್ಲಿಸಲು ನಿರ್ದೇಶಿಸುವ ಮತ್ತು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಯಾವುದೇ ಕಾಮಗಾರಿಯನ್ನು ತೆಗೆದುಹಾಕುವ ಅಥವಾ ಆ ಭೂಮಿಯನ್ನು ಅದರ ಮೂಲಸ್ಥಿತಿಗೆ ತರುವ ಅಧಿಕಾರವಿರುತ್ತದೆ. ಪ್ರಶ್ನಿತ ಪ್ರಸ್ತಾವನೆಯಲ್ಲಿ ಜಮೀನು ಅಭಿವೃದ್ಧಿ ಹಂತದಲ್ಲಿದ್ದು ಸಂಪೂರ್ಣ ಅಭಿವೃದ್ಧಿಯಾಗುವ ಮುನ್ನವೇ ನೋಟೀಸ್ ನೀಡಿ ಅಭಿವೃದ್ಧಿಯನ್ನು ತಡೆಗಟ್ಟಿದ್ದು, ಮಾನ್ಯ ಜಿಲ್ಲಾಧಿಕಾರಿಗಳಿಗೆ ವಿವರಣೆ ನೀಡಲಾಗಿರುತ್ತದೆ. ಅದಲ್ಲದೆ, ಮಾನ್ಯ ಜಿಲ್ಲಾಧಿಕಾರಿಗಳು ಸ.ನಂ. 96/23 ರ 0.30 ಎಕರೆ ಜಮೀನಿಗೆ ದಂಡ ವಿಧಿಸಿ ಭೂಪರಿವರ್ತಿಸಿ ಆದೇಶಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಪ್ರಶ್ನಿತ ಎರಡು ಜಮೀನುಗಳು ಭೂಪರಿವರ್ತನೆಗೊಂಡ ನಂತರ ಮುಖ್ಯಾಧಿಕಾರಿಗಳು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಹಿಂದೆ ಪತ್ರಿಕೆಯಲ್ಲಿ ನಿವೇಶನಗಳು ಮಾರಾಟವಾಗಿರುವ ಬಗ್ಗೆ ವರದಿಯಾಗಿದ್ದರಿಂದ ಸದಸ್ಯಕಾರ್ಯದರ್ಶಿಗಳು ಪರಿಶೀಲಿಸಿಕೊಳ್ಳುವ ಸಲುವಾಗಿ ಮುಖ್ಯಾಧಿಕಾರಿಗಳಿಂದ ಸದರಿ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಖಾತೆ ವಿತರಣೆಯಾಗಿಲ್ಲದಿರುವ ಬಗ್ಗೆ ದೃಢೀಕರಣ ಪತ್ರ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಚರ್ಚೆ ನಡೆದು, ಅರ್ಜಿದಾರರು ಕೆ.ಟಿ.ಸಿ.ಪಿ ಕಾಯ್ದೆಯನ್ವಯ ಪ್ರಾಧಿಕಾರದಿಂದ ನೋಟೀಸ್ ನೀಡಿದ ಕೂಡಲೇ ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದು, ಭೂಪರಿವರ್ತನೆ ಸಮಯದಲ್ಲಿ ದಂಡಪಾವತಿಸಿ, ನಂತರ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಪಡೆಯಲು ಮುಖ್ಯಾಧಿಕಾರಿ, ಪುರಸಭೆ ಇವರ ಮುಖಾಂತರ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಾದ ಕ್ರಮವಾಗಿರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯಿಸಲಾಯಿತು.

ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಕಂಡುಬಂದಿದ್ದು, ನಕ್ಷೆ ಪರಿಷ್ಕರಿಸಿಕೊಳ್ಳಲು ಈಗಾಗಲೇ ಹಿಂಬರಹ ನೀಡಿರುವುದರಿಂದ, ನಾಗರೀಕ ಸೌಲಭ್ಯ ನಿವೇಶನಕ್ಕೆ 9.0ಮೀ ಅಗಲದ ರಸ್ತೆಯನ್ನು ಅಳವಡಿಸಲು ಹಾಗೂ ಉಳಿದಂತೆ ಸದಸ್ಯಕಾರ್ಯದರ್ಶಿ ಸೂಚಿಸುವಂತೆ ನಕ್ಷೆಯನ್ನು ಸರಿಪಡಿಸಿ ಸಲ್ಲಿಸಿದಲ್ಲಿ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಅಭಿಪ್ರಾಯಿಸಲಾಯಿತು.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ನಾಗರೀಕ ಸೌಲಭ್ಯ ನಿವೇಶನಕ್ಕೆ 9.0ಮೀ ಅಗಲದ ರಸ್ತೆಯನ್ನು ಅಳವಡಿಸಲು ಮತ್ತು ಸದಸ್ಯಕಾರ್ಯದರ್ಶಿಯವರು ಸೂಚಿಸುವಂತೆ ವಿನ್ಯಾಸ ನಕ್ಷೆಯನ್ನು ತಯಾರಿಸಿ ಸಲ್ಲಿಸಿದ ನಂತರ ಪ್ರಶ್ನಿತ ಜಮೀನುಗಳ ತಾತ್ಕಾಲಿಕ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ